

ಬಾಂಧವ್ಯ ಕಟ್ಟಿಕೊಳ್ಳುವಾಗಲೇ ವೈಯಕ್ತಿಕ ಲೈಂಗಿಕತೆಯ ಕಲ್ಪನೆಗಳು, ಬಯಕೆಗಳ ಕುರಿತು ಮುಕ್ತ ಸಂವಹನ ನಡೆಯಬೇಕು.

ಡಾ.ವಿನೋದ ಛೆಬ್ಬಿ

# 143: ಪರಸಂಬಂಧಗಳು-6

ಪರಸಂಬಂಧವನ್ನು ಅದರ ಸಾಮಾಜಿಕ ಪ್ರಭಾವದಿಂದ ಬೇರ್ಪಡಿಸಿ ಆಂತರಂಗಿಕ ಮನೋಭಾವನಾತ್ಮಕ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಲು ಹೋದಸಲ ಪ್ರಯತ್ನಪಟ್ಟೆವು.

ಸಂಬಂಧಗಳಲ್ಲಿ ಬದ್ಧತೆಯು ಕಾಲಿಟ್ಟಾಗಲೇ ಪರಸಂಬಂಧವೂ ಕಾಲಿಟ್ಟಿದೆ ಎಂದು ಹೇಳುತ್ತಿದ್ದೆ. ಹಾಗಾಗಿ ಬದ್ಧಸಂಬಂಧವು ತನ್ನ ದೀರ್ಘಾವಧಿಯಲ್ಲಿ ಒಂದಿಲ್ಲೊಂದು ಸಲ ಒಂದಿಲ್ಲೊಂದು ವಿಧದ ಪರಸಂಬಂಧದಿಂದ ಪ್ರಭಾವಿತವಾಗುವ ಸಾಧ್ಯತೆಯು ದಟ್ಟವಾಗಿದೆ. ಹಾಗಾದರೆ ಇದನ್ನು ತಡೆಗಟ್ಟಲು ಏನಾದರೂ ಉಪಾಯಗಳಿವೆಯೆ? ಖಂಡಿತವಾಗಿಯೂ ಇವೆ. ಇವೇನೆಂದು ನೋಡೋಣ.

ಮೊದಲನೆಯದಾಗಿ, ಹೆಣ್ಣು ಗಂಡುಗಳು ಸಂಬಂಧವನ್ನು ಕಟ್ಟಿಕೊಳ್ಳುವ ಪ್ರಾರಂಭದಲ್ಲಿ ಪರಸ್ಪರರ ವೈಯಕ್ತಿಕ ಲೈಂಗಿಕತೆಯ ಬಗೆಗಿನ ಕಲ್ಪನೆಗಳು, ಬಯಕೆಗಳು ಹಾಗೂ ಅಪೇಕ್ಷೆ- ನಿರೀಕ್ಷೆಗಳ ಕುರಿತು ಮುಕ್ತ ಸಂವಹನ ನಡೆಸಬೇಕು. ಸಂಗಾತಿ ಆಗುವವರೊಂದಿಗೆ ತನ್ನ ಆಶೋತ್ತರಗಳನ್ನು ಸಂಕೋಚವಿಲ್ಲದೆ ಹಂಚಿಕೊಳ್ಳಬೇಕು (ಕಾಮಕ್ರಿಯೆಯ ಬಗೆಗೆ ನಾನು ಮಾತಾಡುತ್ತಿಲ್ಲವೆಂದು ಗಮನದಲ್ಲಿ ಇಟ್ಟುಕೊಳ್ಳಿ) ಆದರೆ ವಾಸ್ತವವಾಗಿ ಏನು ನಡೆಯುತ್ತಿದೆ?

ಹಿರಿಯರ ಆಯ್ಕೆಯಂತೆ ವಿವಾಹವಾಗಿ ಪರಸಂಬಂಧದ ಪ್ರಸಂಗವನ್ನು ಎದುರಿಸುತ್ತ ನನ್ನನ್ನು ಭೇಟಿಯಾದ ದಂಪತಿಗಳಿದ್ದಾರೆ. ತಮ್ಮ ಮುಂದಿನ ಲೈಂಗಿಕ ಸಂಬಂಧವು ಹೇಗಿರಬೇಕು ಎಂಬುದರ ಬಗೆಗೆ ಮುಂಚೆ ಇವರು ಮಾತಾಡಿಕೊಂಡಿದ್ದರೇ ಎಂದು ವಿಚಾರಿಸಿದಾಗ ಇಲ್ಲವೆಂದೇ ಉತ್ತರ ಬಂದಿದೆ. ('ಒಂದೆರಡು ವರ್ಷ ಮಗು ಬೇಡ' ಎನ್ನುವ ಮಾತಿನಲ್ಲಿ ಲೈಂಗಿಕ ಬಯಕೆಯಿಲ್ಲ; ಅಷ್ಟೇ ಅಲ್ಲ, ಲೈಂಗಿಕ ಕ್ರಿಯೆ ಬೇಡವೆನ್ನುವ ಛಾಯೆಯಿದೆ.) ಯಾಕಿಲ್ಲವೆಂದು ಕೇಳಿದಾಗ, 'ಅದು (ಲೈಂಗಿಕ ಕ್ರಿಯೆ) ತನ್ನಷ್ಟಕ್ಕೆ ತಾನೇ ಆಗುತ್ತದೆ ಎಂದು ಅನ್ನಿಸಿತ್ತು', 'ಕೇಳಬೇಕೆಂದು ಗೊತ್ತಿರಲಿಲ್ಲ,' ಅಥವಾ 'ಚರ್ಚಿಸಲು ಸಂಕೋಚವಾಯಿತು' ಎನ್ನುವುದರಿಂದ ಹಿಡಿದು, 'ಇಂಥ ಮಾತೆತ್ತಿದರೆ ಸಂಬಂಧ ಮುರಿಯಬಹುದು ಎಂದು ಅಳುಕಿತ್ತು' ಎಂದಿದ್ದಾರೆ. ಇಂಥ ಮಾತಾಡುವುದು ಎಂದರೆ ಸಂಗಾತಿಯ ಶೀಲವನ್ನು ಸಂದೇಹಿಸಿದಂತೆ, ಅಥವಾ ಸಂಗಾತಿಯ ಲೈಂಗಿಕ ಸಾಮರ್ಥ್ಯವನ್ನು ಪರೀಕ್ಷಿಸಿದಂತೆ ಎಂದು ಕೆಲವರು ಅಂದುಕೊಳ್ಳುತ್ತಾರೆ. ಲೈಂಗಿಕ ಬಯಕೆಗಳ ಬಗೆಗೆ ಮಾತಾಡುವುದೇ ಅಸಭ್ಯತೆ ಎಂಬ ನಂಬಿಕೆಯೂ ಒಂದು ಕಾರಣ– ಹೀಗೆಂದುಕೊಳ್ಳುವುದಕ್ಕೆ ಅವರ ಕೌಟುಂಬಿಕ ಸಂಸ್ಕಾರಗಳು ಕಾರಣವಾಗುತ್ತವೆ.

ಇನ್ನು, ಪ್ರೀತಿಸಿ ಬಾಂಧವ್ಯ ಕಟ್ಟಿಕೊಳ್ಳುವವರು ಏನು ಮಾಡುತ್ತಾರೆ? 'ನನ್ನ ಹೊರತು ನೀನು ಯಾರನ್ನೂ ಬಯಸಕೂಡದು, ಯಾರೊಂದಿಗೂ ಸಂಪರ್ಕ ಇಟ್ಟುಕೊಳ್ಳಕೂಡದು' ಎಂದು ಭದ್ರತೆಯ ಅಡಿಪಾಯ ಹಾಕುತ್ತಾರೆ. ಇದೇನೂ ತಪ್ಪಲ್ಲ; ಆದರೆ ಭದ್ರತೆಗೆ ಗಮನ ಕೊಟ್ಟಷ್ಟೂ ಚಿಂತೆ ಹೆಚ್ಚಾಗಿ, ಕಾವಲು ಕಾಯುವುದು ಹೆಚ್ಚಾಗಿ, ರೋಚಕತೆ ಹಾಗೂ ಪ್ರಣಯ ಕಡಿಮೆಯಾಗುತ್ತದೆ. ಇದಕ್ಕೆ ಉಪಾಯ? ಸಂಗಾತಿಯು ತನ್ನ ಬಯಕೆಗಳನ್ನು, ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದರೆ ಆತಂಕಕ್ಕೆ ಕಡಿವಾಣ ಹಾಕಿ ಆಲಿಸಬೇಕು. ಪೂರ್ವಾಗ್ರಹ ಅನಿಸಿಕೆಗಳನ್ನು ಬದಿಗಿಟ್ಟು ಸಂಗಾತಿಯನ್ನು ಅರ್ಥಮಾಡಿಕೊಳ್ಳಲು ಯತ್ನಿಸಬೇಕು. ಒಬ್ಬರು ಮುಕ್ತವಾಗಿ ಮನದಾಸೆಯನ್ನು ಹೊರಗೆ ಹಾಕುತ್ತಿದ್ದರೆ ಇನ್ನೊಬ್ಬರು ಛೀ ಥೂ ಎಂದು ಅದನ್ನು ದೂರವಿಡುವುದನ್ನು ಕಂಡಿದ್ದೇನೆ. ಉದಾಹರಣೆಗೆ, ಇಬ್ಬರು ಸ್ನೇಹಿತರು ತಮ್ಮ ಗೆಳತಿಯರೊಂದಿಗೆ ಭೇಟಿಯಾದರು. ಒಬ್ಬನು ತನ್ನ ಗೆಳತಿಯ ಮುಖಭಾವವನ್ನು ಅದ್ಭುತವಾಗಿ ಸೆರೆಹಿಡಿದ ಚಿತ್ರವನ್ನು ತೋರಿಸಿದ. ನಾಲ್ವರೂ ಬೆರಗುಗಣ್ಣುಗಳಿಂದ ನೋಡುತ್ತಿರುವಾಗ ಇನ್ನೊಬ್ಬನು, 'ನಿನ್ನ ಗೆಳತಿಯ ಚಿತ್ರವನ್ನು ನಾನೂ ಸೆರೆಹಿಡಿಯಬೇಕು' ಎಂದ. ಆಗ ಅವನ ಗೆಳತಿ, 'ಯಾಕೆ, ನಾನಿಲ್ಲವೆ?' ಎಂದು ಮುಖ ಊದಿಸಿಕೊಂಡಳು. ಮಾತು ಬೆಳೆದು ದೊಡ್ಡ ಜಗಳವೇ ಆಯಿತು. ಒಬ್ಬರು ತಮ್ಮ ಬಯಕೆಗಳನ್ನು ವ್ಯಕ್ತಪಡಿಸುವಾಗ ಇನ್ನೊಬ್ಬರು ಅವರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಕೊಡುವುದು ಮುಖ್ಯವಾಗುತ್ತದೆ. ಅದಾಗದಿದ್ದರೆ ಸಂಗಾತಿಯು ತನ್ನ ಸುಪ್ತ ಕಾಮನೆಗಳನ್ನು ಹಂಚಿಕೊಳ್ಳದೆ ಒಳಗೊಳಗೇ ಅನುಭವಿಸಬೇಕಾಗುತ್ತದೆ. ಇನ್ನೊಂದು ಪ್ರಸಂಗದಲ್ಲಿ ಒಬ್ಬನು ತನ್ನ ಹೆಂಡತಿಯು– ಅವಳು ಅವನಿಗಿಂತ ಎತ್ತರ ಇದ್ದಾಳೆ– ಎತ್ತರ ಹಿಮ್ಮಡಿಯ ಪಾದರಕ್ಷೆಗಳನ್ನು ಧರಿಸಿ ಹಾಸಿಗೆಗೆ ಬಂದರೆ ಕಾಮ ಕೆರಳುತ್ತದೆ ಎಂಬುದನ್ನು ಹಂಚಿಕೊಳ್ಳದೆ ಅವಳೊಡನೆ ಕೂಡಲಾಗಿಲ್ಲ; ಹಾಗಾಗಿ ರಸ್ತೆಯಲ್ಲಿ ಎತ್ತರದ ಪಾದರಕ್ಷೆ ಧರಿಸಿದ ಹೆಣ್ಣುಗಳ ಕಡೆಗೆ ಕಣ್ಣು ಹಾಯಿಸುತ್ತ ಹೆಂಡತಿಯ ಕೆಂಗಣ್ಣಿಗೆ ಗುರಿಯಾಗಿದ್ದಾನೆ.

ಬಹುತೇಕ ದಂಪತಿಗಳು ಮದುವೆಗೆ ಮುಂಚೆ ಮೂರನೆಯವರ ಜೊತೆಗೆ (ಉದಾ. ಸಂಗಾತಿಯ ಸ್ನೇಹಿತ/ತೆ, ಸಹೋದ್ಯೋಗಿ, ನೆರೆಯವಳು/ನು) ಇಟ್ಟುಕೊಳ್ಳುವ ಸಂಬಂಧದ ವ್ಯಾಖ್ಯೆಯ ಬಗೆಗಾಗಲೀ, ಮಿತಿಮೀರೆಗಳ ಬಗೆಗಾಗಲೀ ಮಾತಾಡಿಕೊಂಡಿರುವುದಿಲ್ಲ. ಆತ್ಮೀಯ ಮೂರನೆಯವರ ಜೊತೆಗೆ ಹೊರಗೆ ಹೋಗಬಹುದೆ? ನಿತ್ಯ ಸಂಪರ್ಕದ ಸಹೋದ್ಯೋಗಿಯನ್ನು ಎಲ್ಲಿಡುವುದು ಇತ್ಯಾದಿ ವಿಷಯಗಳನ್ನು ಮುಂಚೆಯೇ ಬಗೆಹರಿಸಿಕೊಂಡಿರುವುದಿಲ್ಲ. ಇಲ್ಲೊಬ್ಬ ಮಹಿಳಾ ಉದ್ಯೋಗಿಯು ತನ್ನ ಪುರುಷ ಸಹೋದ್ಯೋಗಿಯೊಂದಿಗೆ ಆಗಾಗ ಪ್ರವಾಸಕ್ಕೆ ಹೋಗಬೇಕಾಗುತ್ತದೆ. ಪ್ರತಿಸಲವೂ ಆಕೆಯ ಗಂಡನೊಡನೆ ಇದರ ಬಗೆಗೆ ಚರ್ಚಿಸುವುದು, ಅವನು ಮೀನಮೇಷ ಮಾಡುವುದು ನಡೆಯುವಾಗ ಅವಳ ಮೇಲೆ ಒತ್ತಡ ಬೀಳುತ್ತದೆ. ಅಂಥ ಪ್ರಸಂಗದಲ್ಲಿ ಮೂವರೂ ಸೇರಿ ಚರ್ಚಿಸಿದರೆ ಪರಿಹಾರ ಸಿಗಬಹುದು.

ಇನ್ನೂ ಕಷ್ಟದ ವಿಷಯವೇನೆಂದರೆ, ಮಾಜೀ ಗೆಳತಿ/ಗೆಳತಿಯ ಜೊತೆಗೆ ವಿವಾಹಿತರ ಸಂಬಂಧ ಹೇಗಿರಬೇಕು? ಈ ಪ್ರಶ್ನೆ ವಿಚಿತ್ರವಾದರೂ ಯಾಕೆ ಮುಖ್ಯವಾಗುತ್ತದೆ ಎಂದರೆ ಕೆಲವೊಮ್ಮೆ ಮಾಜೀ ಪ್ರೇಮಿಯು ನೆರೆಹೊರೆಯವರಾಗಿ, ಸಹೋದ್ಯೋಗಿಯಾಗಿ ಅಥವಾ ಹೊಸ ಸಂಬಂಧಿಯಾಗಿ ಪುನಃ ಕಾಣಿಸಿಕೊಳ್ಳುವ ಪ್ರಸಂಗ ಅನೇಕರಿಗೆ ಎದುರಾಗಿದೆ. ವಿಷಯ ಮುಚ್ಚಿಡುವುದು, ತೇಲಿಸಿ ಮಾತಾಡುವುದು, ಅಲ್ಲಗಳೆಯುವುದು ನಡೆದು, ಯಾರ ತಪ್ಪಿಲ್ಲದೆ ನೋವಿನ ರಾದ್ಧಾಂತ ನಡೆಯುತ್ತದೆ. ಅವನ/ಳ ಮುಖ ನೋಡಕೂಡದು, ಅಥವಾ ಏನೂ ವ್ಯವಹಾರ ಇಟ್ಟುಕೊಳ್ಳಕೂಡದು ಎನ್ನುವ ಕಟ್ಟುನಿಟ್ಟಿನ ಕರಾರು ಆಧುನಿಕ ಪರಿಸರದಲ್ಲಿ ಕೆಲಸ ಮಾಡುವುದಿಲ್ಲ. ಹಾಗಾಗಿ ಮಾಜಿ ಪ್ರೇಮಿಯ ಬಗೆಗೆ, ಅವರೊಂದಿಗೆ ಮುಂದೆ ಇಟ್ಟುಕೊಳ್ಳುವ ಸಂಬಂಧದ ಬಗೆಗೆ ಪಾರದರ್ಶಕವಾದ ಚರ್ಚೆ ನಡೆಯುವುದು ಅಗತ್ಯವಾಗುತ್ತದೆ. ನಾನು ನೋಡಿದ ಒಂದು ದಾಂಪತ್ಯದಲ್ಲಿ ಒಬ್ಬಳು ತನ್ನ ಪ್ರೇಮಿಯೊಂದಿಗೆ ಮುಂಚೆ ಸಹ-ವಾಸದಲ್ಲಿದ್ದು ಅವನನ್ನು ಬಿಟ್ಟುಬಿಟ್ಟಳು. ನಂತರ ಅವನ ಸ್ನೇಹಿತನನ್ನು ಮದುವೆಯಾದಳು. ಈಗ ಮಾಜಿ ಪ್ರೇಮಿಯು ಅವರ ಮನೆಗೆ ಭೇಟಿ ಕೊಡುತ್ತಿರುತ್ತಾನೆ ಎಂದು ಗಂಡನೆದುರೇ ನನ್ನ ಜೊತೆಗೆ ಹಂಚಿಕೊಂಡಳು. ಈ ಮಟ್ಟದ ತಿಳಿವಳಿಕೆ ಗಂಡಹೆಂಡಿರಲ್ಲಿ ಮೂಡಿರಬೇಕಾದರೆ ಅವರಿಬ್ಬರ ಸಂಬಂಧವು ಎಷ್ಟು ಪ್ರಾಮಾಣಿಕ ಆಗಿರಬಹುದು?

ಹೀಗೆ, ವೈವಾಹಿಕ ಚೌಕಟ್ಟಿನೊಳಗೇ ಲೈಂಗಿಕ ಸಂಬಂಧಗಳು ನಡೆಯಬೇಕು ಎನ್ನುವುದು ಉದ್ದೇಶವಾದರೆ ಚೌಕಟ್ಟನ್ನು ಯಾವ ಕಾರಣಕ್ಕೆ ಮೀರಬಹುದು, ಹಾಗೂ ಆಗ ಏನು ಮಾಡಬೇಕು ಎಂದೆಲ್ಲ ಮುಂಚೆಯೇ ಮಾತಾಡಿಕೊಳ್ಳುವುದು ಅತಿಮುಖ್ಯ ಆಗುತ್ತದೆ. ಇಂಥ ವಿಚಾರವೇ ಅನಗತ್ಯ ಎಂದು ಕೆಲವರಿಗೆ ಅನ್ನಿಸಬಹುದು. ಒಂದು ಮನೆಯನ್ನು ಬಾಡಿಗೆಗೆ ಕೊಡುತೆಗೆದುಕೊಳ್ಳುವ ವಿಷಯದಲ್ಲೂ ವಿಷಮ ಪರಿಸ್ಥಿತಿ ಬಂದರೆ ಏನು ಮಾಡುವುದು ಎಂದು ನಮೂದಿಸಿಯೇ ಕರಾರುಪತ್ರಕ್ಕೆ ಇಬ್ಬರೂ ಸಹಿ ಹಾಕುತ್ತಾರೆ. ಹಾಗಿದ್ದರೂ ವಿವಾಹದ ಬಗೆಗೆ ನಾವು ಹೀಗೆ ಯೋಚಿಸುವುದಿಲ್ಲ. ಯಾಕೆಂದರೆ ದಾಂಪತ್ಯಕ್ಕೆ ಒಂದು ಶಾಶ್ವತತೆ ಎಂಬುದಿದೆ ಎಂದು ನಂಬುತ್ತೇವೆ. ಆದರೆ ಇದೊಂದು ಆಶಾದಾಯಕ ನಂಬಿಕೆ ಮಾತ್ರ ಎಂಬುದು ಇತ್ತೀಚಿನ ವಿಚ್ಛೇದನದ ಅಂಕಿಸಂಖ್ಯೆಗಳನ್ನು ನೋಡಿದರೆ ಗೊತ್ತಾಗುತ್ತದೆ!